ರೀತಿಯಾಗಿ ಈ ಪಟ್ಟಬದ್ದ ಹಿತಾಸಕ್ತಿಗಳು ಕಿರುಕುಳವನ್ನು ಕೊಡುತ್ತಿದ್ದಾರೆ ಎಂಬುದನ್ನು ನಾನು ತಿಳಿದುಕೊಳ್ಳುತ್ತೇನೆ. ನಮ್ಮಲ್ಲಿ ಒಂದು ಟಾಸ್ಕ್-ಫೋರ್ಸ್ ಇದೆ, ಇವತ್ತು ಸಂಜೆ 5 ಗಂಟೆಗೆ ಅವರನ್ನು ಕರೆದು ಆದೇಶ ಮಾಡಿ ಸೂಚನೆಯನ್ನು ಕೊಡುತ್ತೇನೆ, ತಕ್ಷಣ ಅಂತಹವರು ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆಂದು ತಮ್ಮ ಮೂಲಕ ಈ ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ. ಆಲ್ಲಿ ಯಾರನ್ನಾದರೂ ಹೊಡಿದಾಗ ನಾವು ಮುಂದಾಗಿ ಹೋಗಿ ನಿಂತುಕೊಳ್ಳುತ್ತೇವೆ; ಇಂತಹ ಒಂದು ಕ್ರಮ ತೆಗೆದುಕೊಳ್ಳುವಾಗ ಚುನಾಯಿತ ಪ್ರತಿನಿಧಿಗಳಿಂದ, ಯಾವುದೇ ಪಕ್ಷದವರಿಂದ ಆಕ್ಷೇಪ ಬರಬಾರದು. ಇವತ್ತೇ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ. ನನ್ನ ಹೆಸರನ್ನು ಹೇಳಿಕೊಂಡು, ಮಾನ್ಯ ಬಿಡಿಎ ಚೇರ್‌ಮನ್‌ರ ಹೆಸರನ್ನು ಹೇಳಿಕೊಂಡರು; ಅವರ ಮೇಲೆ ನಾನು ಕಾನೂನು ಕ್ರಮ ಕೈಗೊಂಡು ಶಿಕ್ಷೆ ಕೊಡುವುದಕ್ಕೆ ಮುಂದಾಗಿದ್ದೇವೆ.

(ಅ) ಚಾಮರಾಜನಗರ ಕ್ಷೇತ್ರದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿ ಕಾರ್ಯದ ಬಗ್ಗೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್ ನಗರ) :— ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಹೋಗಿ ಸುಮಾರು ಮೂರು ತಿಂಗಳಾಗಿದೆ. ಕಳುಹಿಸಿಕೊಡುವಂತೆ ನಾವು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು :— ಮಾನ್ಯ ಖಿರ್ಗೆಯವರು ತಕರಾರು ಮಾಡುತ್ತಿದ್ದಾರೆ; ಮಾನ್ಯ ವಾಟಾಳ್ ನಾಗರಾಜ್‌ರವರು ನನಗಿಂತ ಹಿರಿಯ ಸದಸ್ಯರು, ಮೊದಲು ನನಗೆ ಅವಕಾಶ ಕೊಟ್ಟು ನಂತರ ಅವರಿಗೆ ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ನನಗೆ ಕೇಳಿದರೂ ಕೂಡ ನಾನು ಆ ಕಡೆ ಗಮನ ಕೊಡುತ್ತಿಲ್ಲ, ಏಕೆಂದರೆ, ಅವರ ಕಿತಾಪತಿ ನನಗೆ ಗೊತ್ತು, ನೀವು ಇಬ್ಬರು ಮಾತಾಡುವುದು ನನಗೆ ಕೇಳಿಸುತ್ತಿದ್ದರೂ ನಾನು ನೇರವಾಗಿ ಮಂತ್ರಿಗಳ ಗಮನ ಸೆಳೆಯುವ ಕಡೆ ಹೋಗುತ್ತಿದ್ದೇನೆ. ಅವರು ಮಾತನಾಡಲು ಅಡ್ಡಿಪಡಿಸುತ್ತಾರೆಂದು ನಾನು ಆ ಕಡೆ ಲಕ್ಷವನ್ನು ಕೊಟ್ಟಿಲ್ಲ. ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಮೂರು ತಿಂಗಳಾಗಿರುವುದರಿಂದ ನಾನು ಹಿಂದೆ ಒಂದು ಸಲ ತಮಗೆ ಹೇಳಿದೆ, ಸಭೆಯನ್ನು ಕರೆಯಬೇಕು ಎಂದು. ಇಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಹೋಗುತ್ತಿಲ್ಲ, ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನನ್ನ ಕ್ಷೇತ್ರದ ಹರಪನಹಳ್ಳಿ ಎನ್ನುವ ಒಂದು ಹೋಬಳಿಯಲ್ಲಿ ಸುಮಾರು 5 ಸಾವಿರ ಎಕರೆ ಜಮೀನು ಅವಶ್ಯಕತೆಯಿಂದ ಸಂಪೂರ್ಣವಾಗಿ ನೀರಾವರಿ ನಿಂತು ಹೋಗಿದೆ. ಒಂದೂವರೇ ಎರಡು ತಿಂಗಳಿಂದ ನಿಂತು ಹೋಗಿದೆ. ತಾವು ಕೂಡಲೇ ಟ್ರಾನ್ಸ್‌ಫಾರ್ಮರ್ ತರಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೀರಾ? ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ನೀಡಿ ಇವತ್ತೇ ಕಳುಹಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಅದನ್ನು ತಕ್ಷಣ ಕಳುಸಿಹಿಕೊಡಬೋಕೆಂದು ನಾವು ಕೂಡ ಮಾನ್ಯ ಸದಸ್ಯರ ಜೊತೆ ಆಗ್ರಹ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :— ಅಲ್ಲಿ 20-25 ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಹೋಗಿರುವುದರಿಂದ ತಕ್ಷಣ ಕಳುಹಿಸಿ ಕೊಡಬೇಕು.

ಅಧ್ಯಕ್ಷರು :— ಎಷ್ಟೇ ಇದ್ದರೂ ತಕ್ಷಣ ಕಳುಹಿಸಿಕೊಡಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಹೇಳಿದರೂ ಕೊಡುತ್ತಾರೆ, ಹೇಳದೇ ಇದ್ದರೂ ಕೊಡುತ್ತಾರೆ.

ಅಧ್ಯಕ್ಷರು :— ಅದಕ್ಕಾಗಿ ನಾವು ಬುದ್ಧಿವಂತಿಕೆಯಿಂದ ಶಿಫಾರಸ್ಸು ಮಾಡುತ್ತಿದ್ದೇವೆ; ಯಾವಾಗಲಾದರೂ ಒಂದು ಸಲ ನಾವು ಈ ಊರಿಗೆ ಹೋದಾಗ ಅವರಿಗೆ ಸಮಾಧಾನವಾಗಲಿ ಎಂದು.

ಶ್ರೀ ಶರಣಬಸಪ್ಪ ದರ್ಶನಾಪುರ :— ಕಳೆದ ಎರಡು ತಿಂಗಳುಗಳಿಂದ ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಿಗೆ ಸುಟ್ಟು ಸಪ್ಲೈ ಆಗದೇ ಇರುವುದರಿಂದ ಆ ವಿಚಾರ ಇದೇ ಸದನದಲ್ಲಿ ಚರ್ಚೆಯಾಗಿದೆ. ಟ್ರಾನ್ಸ್‌ಫಾರ್ಮರ್‌ಗಳು ಬರುತ್ತವೆ, ಆದಷ್ಟು ಬೇಗನೆ 7 ದಿವಸಗಳಲ್ಲಿ ನಾವು ಅದನ್ನು ಕಳುಹಿಸಿ ಕೊಡುತ್ತೇವೆ.

ಅಧ್ಯಕ್ಷರು :— ಕೂಡಲೇ ಎಷ್ಟು ಸಾಧ್ಯವಿದೆ ಅಷ್ಟು ಕಳುಹಿಸಿ ಕೊಡಿ.

ಶ್ರೀ ಶರಣಬಸಪ್ಪ ದರ್ಶನಾಪುರ (ಮಾನ್ಯ ಇಂದನ ರಾಜ್ಯ ಸಚಿವರು) :— ನಾವು ಕೂಡಲೇ ಕಳುಹಿಸಿ ಕೊಡುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ :— ಇವು 20-30 ಟ್ರಾನ್ಸ್‌ಫಾರ್ಮರ್‌ಗಳು ಆಯಿತು; ನನ್ನ ಕ್ಷೇತ್ರದಲ್ಲಿ 40-50 ಕೆಟ್ಟು ಹೋಗಿವೆ, ಇಡೀ ರಾಜ್ಯದಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಾಗಿ ಕೆಟ್ಟು ಹೊಗುತ್ತಿರುವುದರಿಂದ ಕಾರಣ ಏನು ಎನ್ನುವುದನ್ನು ಇವರು ಕಂಡು ಹಿಡಿಯಬೇಕಲ್ಲ! ಅವು ಕೆಟ್ಟು ಹೋಗುತ್ತವೆ, ಹೊಸದಾಗಿ ತರುತ್ತೇವೆ ಎಂದು ಹೇಳುವುದು ಬೇರೆ ವಿಚಾರ,

ಅಧ್ಯಕ್ಷರು :— ವೋಲ್ಟೇಜ್ ಮತ್ತು ಡಿಸ್ಟ್ರಿಬ್ಯೂಷನ್ ಲೈನ್ಸ್‌ಗೆ ಡ್ರಾ ಮಾಡಿ ಯಾವುದೋ ಒಂದು ಕಾಲವಾಗಿದೆ. ಲೋಡ್ ಕೂಡ ಇವತ್ತು ಜಾಸ್ತಿಯಾಗಿದೆ.